

ಸಾಯಂಕಾಲದಲ್ಲೂ ಅವನ ತೋಟ ಹಿಂದೆಲ್ಲೂ ಕಾಣದಷ್ಟು ಸುಂದರವಾಗಿತ್ತು. ಗುಲಾಬಿ ಹೂಗಳು ಇನ್ನೂ ಬಾಡದೆ ಚೆಲುವಾಗಿದ್ದು, ಅವುಗಳ ಪರಿಮಳ ಗಾಳಿಯಲ್ಲೆಲ್ಲಾ ಪಸರಿಸಿತ್ತು.

ಚಿರಪರಿಚಿತ ಕಿರಕಲು ಶಬ್ದ ಬಂದ ಕಡೆ ಹ್ಯಾರಿಸನ್ ತನ್ನ ತಲೆಯನ್ನು ತಿರುಗಿಸಿದ. ಕೈದೋಟದ ಬಾಗಿಲಿನಲ್ಲಿದ್ದ ವ್ಯಕ್ತಿಯನ್ನು ನೋಡಿದ ಮರುಕ್ಷಣವೇ ಅವನ ಮುಖದಲ್ಲಿ ಅಚ್ಚರಿಯ ಭಾವ ಮೂಡಿತು. ಏಕೆಂದರೆ, ಅಂಗಳದ ಕಾಲುದಾರಿಯಲ್ಲಿ ಬರುತ್ತಿರುವ ನಾಜೂಕಿನ ಈ ಆಕೃತಿ, ಪ್ರಪಂಚದ ಈ ಭಾಗದಲ್ಲಿ ಕಾಣಿಸಿಕೊಳ್ಳುತ್ತದೆಂದು ಅವನು ಊಹಿಸಿಯೇ ಇರಲಿಲ್ಲ.

'ಎಂತಹ ಅದ್ಭುತವಿದು! ಅದು ಮಸ್ಯೂರ್ ಪ್ವರೊನಾ' ಎಂದು ಹ್ಯಾರಿಸನ್ ಕೂಗಿ ಹೇಳಿದ.